**ದಿನಾಂಕಃ 09.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ. ಎನ್.ಕೆ. ವಕೀಲರಿಂದಃ**

ಈ ದಿನ ನ್ಯಾಯಾಲಯಕ್ಕೆ 3 ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ವಾದಿ ಮತ್ತು 3 ನೇ ಪ್ರತಿವಾದಿ ಅಣ್ಣ ತಮ್ಮಂದಿರು ಅಂದರೆ ಅಲ್ಲ. ನಾನು ಚನ್ನಬಸಪ್ಪನನ್ನು ನೋಡಿರುತ್ತೇನೆ. ಚನ್ನಬಸಪ್ಪನಿಗೆ ಮೂರು ಜನ ಮಕ್ಕಳು. ಅವರೆಂದರೆ ಉಳಿವೆಪ್ಪ, ಮಹಾಲಿಂಗಪ್ಪ ಮತ್ತು ಬಸವರಾಜಪ್ಪ. ಚನ್ನಬಸಪ್ಪನಿಗೆ ವೀರಬಸಮ್ಮ ಮತ್ತು ರತ್ನಮ್ಮ ಎಂಬ ಹೆಣ್ಣು ಮಕ್ಕಳು ಇದ್ದರು ಅಂದರೆ ನನಗೆ ಗೊತ್ತಿಲ್ಲ. ಗುರುಸಿದ್ದಪ್ಪ ಮತ್ತು ಬಸವಣ್ಣಮ್ಮ ರವರಿಗೆ 1 ಮತ್ತು 2 ನೇ ಪ್ರತಿವಾದಿಯವರು ಮಾತ್ರ ಮಕ್ಕಳು ಅಂದರೆ ಸರಿ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳು ನನಗೆಂ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಮಾಣ ಪತ್ರಕ್ಕೆ 3 ನೇ ಪ್ರತಿವಾದಿ ಮಾಹಿತಿ ನೀಡಿರುತ್ತಾನೆ. ನಾನು ಸಹಿ ಮಾಡಿರುತ್ತೇನೆ. ನಿಪಿ–18 ರಲ್ಲಿ ಕಾಣುವ ಕೆಂಪು ಬಣ್ಣದ ಹಂಚಿನ ಮನೆಯು 3 ನೇ ಪ್ರತಿವಾದಿಯವರದ್ದಾಗಿದ್ದು, ಅದರ ಪಕ್ಕದಲ್ಲಿರುವ ಆರ್.ಸಿ.ಸಿ ಕಟ್ಟಡವು 4 ನೇ ಪ್ರತಿವಾದಿಯವರದ್ದು ಅಂದರೆ ಸರಿ. 4 ನೇ ಪ್ರತಿವಾದಿ ಕಟ್ಟಿರುವ ಆರ್.ಸಿ.ಸಿ. ಕಟ್ಟಡದ ಜಾಗವು 1 ಮತ್ತು 2 ನೇ ಪ್ರತಿವಾದಿಯವರದ್ದು ಅಂದರೆ ಸರಿ. 3 ನೇ ಪ್ರತಿವಾದಿಯು ವಾಸವಿದ್ದ ಮನೆಯು ಮೊದಲು ಕರಿಹಂಚಿನ ಮನೆ ಇದ್ದು, ಈಗ ಅಲ್ಲಿ ಹೊಸ ಕಟ್ಟಡವನ್ನು ಕಟ್ಟಿರುತ್ತಾರೆ ಅಂದರೆ ಸರಿ. ನಾನು 1977 ರಲ್ಲಿ ಜನಿಸಿರುತ್ತೇನೆ. ದತ್ತು

ಸಮಾರಂಭಕ್ಕೆ ನನ್ನನ್ನು 3 ನೇ ಪ್ರತಿವಾದಿ ಕರೆದಿರುತ್ತಾರೆ. ಸದರಿ ದತ್ತು ಸಮಾರಂಭಕ್ಕೆ ಸುಮಾರು ಸಾವಿರಾರು ಜನ ಸೇರಿದ್ದರು. ಸದರಿ ಕಾರ್ಯಕ್ರಮದಲ್ಲಿ ಭಾವಚಿತ್ರ ತೆಗೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಕಾರ್ಯಕ್ರಮದಲ್ಲಿ ನಾನು ಯಾವುದೇ ಪತ್ರಕ್ಕೆ ಸಹಿ ಹಾಕಿರುವುದಿಲ್ಲ. ಸದರಿ ಕಾರ್ಯಕ್ರಮದ ಪೌರತ್ವವನ್ನು 3 ನೇ ಪ್ರತಿವಾದಿಯು ವಹಿಸಿಕೊಂಡಿರುತ್ತಾರೆ. ನಾನು ಹೇಳಿದಂತೆ ಯಾವುದೇ ದತ್ತು ಸಮಾರಂಭಕ್ಕೆ ಭಾಗವಹಿಸಿರುವುದಿಲ್ಲ. ವಾದಿ ಮತ್ತು 3 ನೇ ಪ್ರತಿವಾದಿಯವರ ಮುಲಾಜಿಗೆ ಒಳಗಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**